**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಇವರು ನಿಯಮ-330ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಉತ್ತರ.**

**ವಿಷಯ:**

ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಐ.ಸಿ.ಯು ಬೆಡ್ ಸಿಗದೆ ರೋಗಿಗಳು ನರಕಯಾತನೆ ಅನುಭವಿಸಿ ಸಾವನ್ನಪ್ಪುತ್ತಿದ್ದು, ಸರ್ಜರಿಯಾಗಿ 3 ತಿಂಗಳವರಗೆ ಕಾಯಬೇಕಾಗಿದೆ. ಗಂಭೀರ ಸಮಸ್ಯೆಯಿಂದ ಬಳಲುವ ರೋಗಿಗಳಿಗೆ ಐಸಿಯುನಲ್ಲಿ ಚಿಕಿತ್ಸೆ ನೀಡದೇ ಸಾಮಾನ್ಯ ವಾರ್ಡ್ ನಲ್ಲಿ ಚಿಕಿತ್ಸೆ ನೀಡುವುದು ಅಕ್ಷಮ್ಯ. ಉತ್ತಮ ಆರೋಗ್ಯ ಹೊಂದುವುದು ಮತ್ತು ಉತ್ತಮ ಚಿಕಿತ್ಸೆ ಪಡೆಯವುದು ದೇಶದ ನಾಗರೀಕರಿಗೆ ಸಂವಿಧಾನ ಬದ್ಧವಾದ ಹಕ್ಕು ಆಗಿದೆ. ಈ ಹಕ್ಕನ್ನು ರಾಜ್ಯ ಸರ್ಕಾರ ನಿರಾಕರಿಸುತ್ತಿರುವುದು ಖೇದಕರ ಎಂಬ ವಿಷಯದ ಕುರಿತು.

**ಉತ್ತರ:**

ಕೊಪ್ಪಳ ಜಿಲ್ಲಾ ಬೋಧಕ ಆಸ್ಪತ್ರೆಯಲ್ಲಿ ದಾಖಲಾಗುವ ಒಳರೋಗಿಗಳ ಸಂಖ್ಯೆಯ ಶೇಕಡವಾರು ಪ್ರಮಾಣಕ್ಕೆ ಹೋಲಿಸಿದಾಗ ಮರಣ ಪ್ರಕರಣಗಳು ಹೆಚ್ಚಾಗಿರುವುದಿಲ್ಲ. ಕಾರಣ,

1. ಕೊಪ್ಪಳ ಜಿಲ್ಲಾ ಬೋಧಕ ಆಸ್ಪತ್ರೆಯು Tertiary Care Center ಆಗಿರುತ್ತದೆ.
2. ಸುತ್ತಮುತ್ತಲಿನ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಕೊನೆಯ ಹಂತದ Refferal ಗಳು ಬರುತ್ತಿರುತ್ತವೆ.
3. ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ NICU ಕೊಪ್ಪಳ ನಗರದಲ್ಲಿಯೇ ಒಂದೇ ಇದ್ದು, ಬೇರೆ ಯಾವುದೇ ABark ನೊಂದಾಯಿತ ಆಸ್ಪತ್ರೆಗಳು ಇರುವುದಿಲ್ಲ. ಆದುದರಿಂದ ಎಲ್ಲಾ ಅನಾರೋಗ್ಯ ನವಜಾತ ಶಿಶುಗಳಿಗೆ ಜಿಲ್ಲಾಸ್ಪತ್ರೆಯ NICU ಒಂದೇ Care Center ಆಗಿರುತ್ತದೆ.
4. ಮೇಲಿನ ಅಂಶಗಳ ಹೊರತಾಗಿಯೂ ಪ್ರಸಕ್ತ ವರ್ಷ (01/01/2024 ರಿಂದ ಜೂನ್-2024ರವರೆಗೆ) 606 ರೋಗಿಗಳು ಮರಣ ಹೊಂದಿದ್ದು, ಈ ಸಂಖ್ಯೆಯು 14363 ಒಳ ರೋಗಿಗಳ ದಾಖಲಾತಿಯ 4.2% ನಷ್ಟು ಇರುತ್ತದೆ. ಇದು Tertiary Care ಆಸ್ಪತ್ರೆಗಳ ಮರಣ ಪ್ರಮಾಣದ Norms (10%) ಗಿಂತ ಕಡಿಮೆ ಇರುತ್ತದೆ.

ಕಿಮ್ಸ್ ಜಿಲ್ಲಾ ಬೋಧಕ ಆಸ್ಪತ್ರೆಯಲ್ಲಿ ಒಟ್ಟಾಗಿ 53 I.C.U ಬೆಡ್‌ಗಳು(Medicine-11, Paediatrics-20, Surgery-18, OBG-04) ಚಿಕಿತ್ಸೆಗೆ ಲಭ್ಯವಿದ್ದು, ಯಾವುದೇ I.C.U ಬೆಡ್ ಗಳ ಕೊರತೆ ಇರುವುದಿಲ್ಲ. ಈ ಸಂಖ್ಯೆಯು ಈ ಕೆಳಕಂಡ ಪಟ್ಟಿಯಂತೆ NMC ನಿಯಮಾವಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿವೆ.

| As Per NMC UG MSR 2018( for 150 Admission) I.C.U Beds Required | No of Beds Available in KIMS Koppal |
|---|---|
| General Medicine -10 | 11 |
| Paediatrics- 05 | 20 |
| Surgery- 05 | 18 |
| OBG- 02 | 4 |
| Total- 22 | 53 |

I.C.U ಬೆಡ್ ಗಳ ಹೊರತಾಗಿ ತುರ್ತು ಚಿಕಿತ್ಸಾ ವಾರ್ಡ್‌ನಲ್ಲಿ 12 ಬೆಡ್ ಗಳು ಮತ್ತು Extended Emergency ವಾರ್ಡ್‌ನಲ್ಲಿ 30 ಬೆಡ್ ಗಳು ಇದ್ದು, ಅದರಲ್ಲಿ 24 ಬೆಡ್ ಗಳಿಗೆ ವೆಂಟಿಲೇಟರ್ ಸೌಲಭ್ಯವಿರುತ್ತದೆ.

ಮೇಲೆ ತಿಳಿಸಿದ ಬೆಡ್‌ಗಳ ಹೊರತಾಗಿಯೂ ಕೂಡಾ ಕಿಮ್ಸ್ ಕೊಪ್ಪಳ ಸಂಸ್ಥೆಯ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ 450 ಹಾಸಿಗೆ ಸಾಮರ್ಥ್ಯದ ಬೋಧಕ ಆಸ್ಪತ್ರೆಯ ಕಾಮಗಾರಿಯು ಮುಕ್ತಾಯದ ಹಂತದಲ್ಲಿದ್ದು, ನೂತನ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯಲ್ಲಿ 36 ಇಂಟೆನ್ಸಿವ್ ಕೇರ್ ಬೆಡ್‌ಗಳು ಮತ್ತು ಪ್ರಸ್ತುತ ಜಿಲ್ಲಾಸ್ಪತೆಯಲ್ಲಿ 63 ಇಂಟೆನ್ಸಿವ್ ಕೇರ್ ಬೆಡ್‌ಗಳು ಸೇರಿ ಒಟ್ಟಾರೆಯಾಗಿ 99 ಇಂಟೆನ್ಸಿವ್ ಕೇರ್ ಬೆಡ್‌ಗಳು ಸೇರಿದಂತೆ ಒಟ್ಟು 450 ಬೆಡ್‌ಗಳು ಲಭ್ಯವಿರುತ್ತವೆ. ಹೀಗೆ ಪ್ರಸ್ತುತ ಜಿಲ್ಲಾ ಬೋಧಕ ಆಸ್ಪತ್ರೆ ಮತ್ತು ತಾಯಿ ಮತ್ತು ಮಕ್ಕಳ ಆಸ್ಪತ್ರೆಯ 600 ಹಾಸಿಗೆಗಳು ಮತ್ತು ನೂತನ ಬೋಧಕ ಆಸ್ಪತ್ರೆಯ 450 ಹಾಸಿಗೆಗಳು ಸೇರಿ ಒಟ್ಟಾರೆಯಾಗಿ 1050 ಹಾಸಿಗೆಗಳು ಲಭ್ಯವಿರುತ್ತವೆ.

ಕಿಮ್ಸ್ ಕೊಪ್ಪಳ ಸಂಸ್ಥೆಯಲ್ಲಿ 02 ತಿಂಗಳ ಮಟ್ಟಿಗೆ ENT ವಿಭಾಗದಲ್ಲಿ ಎಲೆಕ್ಟಿವ್ ಶಸ್ತ್ರಚಿಕಿತ್ಸೆಗಳಲ್ಲಿ ಸಮಸ್ಯೆಯಾಗಿತ್ತು. ವಿಭಾಗದ ಮುಖ್ಯಸ್ಥರಿಗೆ ಎಚ್ಚರಿಕೆ ನೋಟೀಸ್ ನೀಡಿ ಕಾರ್ಯವೈಖರಿ ಸರಿಪಡಿಸಿಕೊಳ್ಳಲು ತಿಳಿಸಲಾಗಿದೆ. ಪ್ರಸ್ತುತ ಈ ವಿಭಾಗದಲ್ಲಿ ಯಾವುದೇ ರೋಗಿಗಳು ಶಸ್ತ್ರಚಿಕಿತ್ಸೆಗಾಗಿ ಕಾಯುತ್ತಿರುವುದಿಲ್ಲ.

ಸಂಖ್ಯೆ:ಎಂಇಡಿ 381 ಎಂಪಿಎಸ್ 2024

(ಡಾ|| ಶರಣಪ್ರಕಾಶ ಆರ್. ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು